**ಸಾಕ್ಷಿಗೆ ದಿಃ 03.01.2024 ರಂದು ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ಮೂರನೇ ಪ್ರತಿವಾದಿ ಪರವಾಗಿ ಶ್ರೀ ಎಸ್.ಎನ್.ಜಿ. ವಕೀಲರಿಂದಃ**

3. ಕಾಕ್ರಿಶನರಿ ಲೈಮ್ ಸ್ಟೋನ್ ಎಂದರೆ ರಾಡಿ ಮಣ್ಣು, 2 ರಿಂದ 3 ಸೆಂ.ಮೀ ಅಳತೆಯ ಗಟ್ಟಿಕಲ್ಲು ಎಂದರೆ ಸರಿಯಲ್ಲ. ಕಾಕ್ರಿಶನರಿ ಲೈಮ್ ಸ್ಟೋನ್ ಹವಾಮಾನದ ಆಧಾರದ ಮೇಲೆ ತಯಾರಾದ ಕಲ್ಲು ಎಂದರೆ ಸರಿ. ಈ ವಿಚಾರ ನನಗೆ ಭೂಮಿಯನ್ನು ಅಗಿಯುವಾಗ ಗೊತ್ತಾಯಿತು ಎಂದರೆ ಸರಿ. ಈ ವಿಚಾರವನ್ನು ಮೂರನೇ ಪ್ರತಿವಾದಿಗೆ ತಿಳಿಸಿರುತ್ತೇನೆ. ಆದರೆ ಯಾವ ನಿಖರವಾದ ದಿನಾಂಕದಂದು ತಿಳಿಸಿರುತ್ತೇನೆ ಎಂದು ಈಗ ಹೇಳಲು ನೆನಪಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ, ಈ ವಿಚಾರ ಮೂರನೇ ಎದುರುದಾರರು ವಿಚಾರಣೆ ಮಾಡಿದಾಗ ಗೊತ್ತಾಯಿತು. ಏಳು ದಿನಗಳ ಒಳಗಾಗಿ ಈ ವಿಚಾರವನ್ನು ಮೂರನೇ ಎದುರುದಾರರಿಗೆ ಟೆಂಡರ್ ಪ್ರಕಾರ ತಿಳಿಸಬೇಕಾಗಿತ್ತು ಎಂದರೆ ಸರಿ. ಈ ಪ್ರಕಾರ ನಾನು ಟೆಂಡರ್ ನಿಯಮಗಳನ್ನು ಪರಿಪಾಲಿಸಿ ಮೂರನೇ ಪ್ರತಿವಾದಿಯವರ ಗಮನಕ್ಕೆ ತಂದಿರುತ್ತೇನೆ. ಕಾಕ್ರಿಶನರಿ ಲೈಮ್ ಸ್ಟೋನ್ ಅನ್ನುವುದು ಎಲ್ಲ ವಿಧವಾದ ಮಣ್ಣು ಇದ್ದರೂ ಸಹ ನಾನು ಸಹಕರಿಸದೇ ಇದ್ದ ಕಾರಣ ಅದನ್ನು Extra Item ಎಂದು ಪರಿಗಣಿಸಿರುತ್ತಾರೆ ಎಂದರೆ ಸರಿ. Extra Item ಗೆ ಸಂಬಂಧಪಟ್ಟ ಬೆಲೆಯನ್ನು ಹೇಳಬೇಕಾದರೇ ನಿಯಮಾವಳಿಗಳನ್ನು ಪರಿಪಾಲಿಸಬೇಕು ಎನ್ನುವುದು ಸರಿ. Extra Item ಬೆಲೆಯನ್ನು ಕೊಡಲು EFI ನ ಮೂರನೇ ಎದುರುದಾರರ ಮೇಲಿನ ಅಧಿಕಾರಿಗಳು ಅನುಮೋದಿಸಿ ಸರ್ಕಾರದ ಅನುಮತಿಯನ್ನು ಪಡೆಯಬೇಕು ಎನ್ನುವುದು ಸರಿ. ಸಂಬಂಧಿತ ಕಾಲದಲ್ಲಿ ಸಕ್ರಿಯವಾಗಿ ನಾನು Extra Item ನ ಬೆಲೆಯನ್ನು ಕೊಡಬೆಕು ಎಂದು ಕೇಳಿಲ್ಲ ಎನ್ನುವುದು ಸರಿಯಲ್ಲ. ನಾನು Extra Item ನ ಬೆಲೆಯನ್ನು ಸೂಕ್ತ ಸಮಯದಲ್ಲಿ ಕೊಡಲಿಲ್ಲ ಎಂದು ಹೇಳಿ ಇ.ಇ. ರವರಿಗೆ ದಿಃ 27.01.2001 ರಂದು ಅವರೇ ಬೆಲೆಯನ್ನು ನಿಗದಿಪಡಿಸಿ ತಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದರು ಎಂದರೆ ಸರಿಯಲ್ಲ. ಇದರ ಬಗ್ಗೆ ಮ್ಯಾನೇಜಿಂಗ ಡೈರೆಕ್ಟರರವರು TAC ರವರಿಗೆ ಮಾನ್ಯ ಮಾಡಬೇಕು ಎಂದು ದಿಃ 03.01.2002 ರಂದು ಕಳುಹಿಸಿದರು ಎನ್ನುವುದು ನನಗೆ ಗೊತ್ತಿಲ್ಲ. ಇದೇ ರೀತಿ ದಿಃ 25.09.2002 ರಂದು TAC ರವರ ಮುಂದೆ

ಸಂಬಂಧಪಟ್ಟ ಬೆಲೆಯನ್ನು ಅನುಮೋದಿಸಬೇಕೆಂದು ಕೋರಿ ಇಡಲಾಯಿತು ಎನ್ನುವುದು ನನಗೆ ಗೊತ್ತಿಲ್ಲ. ಈ ವಿಚಾರವಾಗಿ TAC ಗೆ ಸಂಬಂಧಪಟ್ಟ ಅಧಿಕಾರಿಗಳು ಮುಖ್ಯ ಅಭಿಯಂತರರು ಬೆಳಗಾವಿ ಮತ್ತು ಶಿವಮೊಗ್ಗರವರು ತನಿಖೆ ಮಾಡಿ ಮಾಹಿತಿ ನೀಡಬೇಕೆಂದು ಹೇಳಿದ್ದರು ಎಂದರೆ ಸರಿ. ಇದರ ಪ್ರಕಾರ ಮುಖ್ಯ ಅಭಿಯಂತರರು ಬೆಳಗಾವಿ ಮತ್ತು ಶಿವಮೊಗ್ಗರವರು ದಿಃ 16.09.2004 ರಂದು ತಮ್ಮ ತನಿಖಾ ವರದಿಯನ್ನು ಸಲ್ಲಿಸಿದರು ಎಂಬುದು ನನಗೆ ಗೊತ್ತಿಲ್ಲ. ತದನಂತರ ದಿಃ 16.09.2004 ರಂದು TAC ರವರು ಮತ್ತೊಂದು ಮಿಟಿಂಗನ್ನು ಮಾಡಿದರು ಎಂಬುದು ನನಗೆ ಗೊತ್ತಿಲ್ಲ. TAC ಅಧಿಕಾರಿಗಳು ಬೆಲೆಯನ್ನು ನಿಗದಿ ಪಡಿಸಿ, ಬೋರ್ಡ ಮುಂದೆ ಇಟ್ಟು ಅಲ್ಲಿ ಬೆಲೆ ನಿಗದಿಪಡಿಸಿದರು ಎಂಬ ವಿಚಾರ ನನಗೆ ಗೊತ್ತಿಲ್ಲ. ದಿಃ 22.11.2005 ರಂದು ಸಪ್ಲಿಮೆಂಟರಿ ಅಗ್ರಿಮೆಂಟನ್ನು ನಾವು ಮಾಡಿಕೊಂಡೆವು ಎಂದರೆ ಸರಿ. ಸಪ್ಲಿಮೆಂಟರಿ ಅಗ್ರಿಮೆಂಟದಲ್ಲಿ Extra Item ನ ಬೆಲೆ ಇತ್ತು ಎಂದರೆ ಸರಿ. ಸಾಕ್ಷಿ ಸ್ವತಃ ಮುಖ್ಯ ಅಭಿಯಂತರರು ನೀಡಿದ ವಿಚಾರಣೆಯ ಮೇರೆಗೆ Extra Item ನ ಬೆಲೆ ಇರಲಿಲ್ಲ ಎಂದು ನುಡಿಯುತ್ತಾರೆ. ಆರ್ ಎ ಬಿಲ್ ನಂಃ 6 ಮತ್ತು 7 ನ್ನು ನಾನು ಆಕ್ಷೇಪಣೆಯ ಮೇರೆಗೆ ಪಡೆದುಕೊಂಡಿದ್ದೇನೆ.

4. ಕಾಕ್ರಿಶನರಿ ಲೈಮ್ ಸ್ಟೋನಗೆ ಯೋಗ್ಯವಾದ ಬೆಲೆ ನಿಗದಿ ಮಾಡಿದರೂ ಸಹ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತೇನೆ ಎಂದರೆ ಸರಿಯಲ್ಲ.

ಮರುಹೇಳಿಕೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.